7) ಭಾರತ ಸರ್ಕಾರದ ಉಣ್ಣೆ ಮಂಡಳಿ ನೆರವಿನಿಂದ ಉಣ್ಣೆ ನೇಯುವುದಕ್ಕೆ ಮೆಡ್ಲೇರಿ ಚರಕಗಳನ್ನು ಶೇಕಡ 50 ರಷ್ಟು ಸಹಾಯಾನುದಾನದ ರೂಪದಲ್ಲಿ ವಿತರಿಸಲಾಗುವುದು.

8) ರೈತರಿಗೆ ಕಾರ್ಪೆಟ್ ನೇಯುವ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ ಹಾಗೂ ಯಾಂತ್ರೀಕೃತ ಉಣ್ಣೆ ಕಟಾವು ತರಬೇತಿ ನೀಡಲಾಗುವುದು.

9) ಸಮಗ್ರ ಕುರಿ ಆರೋಗ್ಯ ರಕ್ಷಣೆಗೆ ಕುರಿ ಜಂತು ನಾಶಕ ಔಷಧಿ ನೀಡಲಾಗುವುದು

10) ಕುರಿ ಸಂವರ್ಧನಾ ಕ್ಷೇತ್ರಗಳಲ್ಲಿ ವಿದೇಶಿ ಶುದ್ದ ತಳಿ ಹಾಗೂ ಮಿಶ್ರ ಹಾಗೂ ಮಿಶ್ರ ತಳಿ ಟಗರುಗಳನ್ನು ಉತ್ಪಾದಿಸಿ, ರೈತರಿಗೆ ವಿತರಿಸಲಾಗುತ್ತಿದೆ ಹಾಗೂ ರೈತರಿಗೆ ಆಧುನಿಕ ಕುರಿ ಸಂವರ್ಧನಾ ಕಾರ್ಯಕ್ರಮಗಳಲ್ಲಿ ತರಬೇತಿ ನೀಡಲಾಗುತ್ತಿದೆ.

ಊ) ಇಲ್ಲ.

ಋ) ಇಲ್ಲ.

ಜವಾಹರ್ ರೋಜಗಾರ್ ಯೋಜನೆಗೆ ಹಣ ಬಿಡುಗಡೆ

173 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಜವಾಹರ್ ರೋಜಗಾರ್ ಯೋಜನೆಯಲ್ಲಿ ಇಲ್ಲಿಯವರೆಗೆ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಿರುವ ಹಣವೆಷ್ಟು (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಿಲ್ಲಾ ಪಂಚಾಯತಿಗಳಿಗೆ ತಮ್ಮ ವಂತಿಕೆಯ ಪ್ರಮಾಣದ ಹಣವನ್ನು ಬಿಡುಗಡೆ ಮಾಡುವಾಗ ಅನುಸರಿಸುತ್ತಿದ್ದ ಮಾರ್ಗಗಳು ಯಾವುವು?

ಇ) ನೇರವಾಗಿ ಜಿಲ್ಲಾ ಪಂಚಾಯಿತಿಗೆ ಸರ್ಕಾರ ಹಣವನ್ನು ಬಿಡುಗಡೆ ಮಾಡಿ, ಸರ್ಕಾರದ ಆದೇಶದಂತೆ ಜನಸಂಖ್ಯೆ ಮತ್ತು ಪರಿಶಿಷ್ಟ ಜಾತಿ ವರ್ಗದ ಪ್ರಮಾಣದ ಆಧಾರದ ಮೇಲೆ ಗ್ರಾಮ ಪಂಚಾಯತ್‌ಗೆ ಮತ್ತು ಜಿಲ್ಲಾ ಪಂಚಾಯತಿಯ ಶೇಕಡಾ 20 ಯೋಜನೆಯ ಕಾಮಗಾರಿಗಳಿಗೆ ಹಂಚುವ ಕ್ರಮ ಸರಿಯೇ?

ಈ) ಸರ್ಕಾರದವರು ನಿರ್ಧಿಷ್ಟ ಕಾಮಗಾರಿಗಳಿಗೆ ಕ್ಷೇತ್ರವಾರು, ತಾಲ್ಲೂಕುವಾರು ಹಣವನ್ನು ಮಂಜೂರು ಮಾಡುವುದರ ಮೂಲಕ ಜಿಲ್ಲಾ ಪಂಚಾಯತಿಗಳಿಗೆ ಹಣವನ್ನು ಬಿಡುಗಡೆ ಮಾಡಲು ಅವಕಾಶವಿದೆಯೇ, ಹಾಗಿದ್ದಲ್ಲಿ ಇದರಿಂದ ಕೇಂದ್ರ ಸರ್ಕಾರದ ನಿಬಂಧನೆಯ ಉಲ್ಲಂಘನೆಯಾಗುವುದಿಲ್ಲವೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವರು) :

ಅ) ರೂ. 5171.49 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ.

ಆ) ಜವಾಹರ್ ರೋಜಗಾರ್ ಯೋಜನೆಯ ಕೈಪಿಡಿ ಮಾರ್ಗಸೂಚಿ ಭಾಗ - 3 ಕಂಡಿಕ 11ರ ಪ್ರಕಾರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಿಲ್ಲಾ ಪಂಚಾಯತಿಗಳಿಗೆ ತಮ್ಮ ವಂತಿಕೆಯ ಪ್ರಮಾಣದ ಹಣವನ್ನು ಬಿಡುಗಡೆ ಮಾಡುತ್ತವೆ.

(ಭಾಗ - 3 ಕಂಡಿಕ 11ರ ಉದ್ಧೃತ ಭಾಗದ ಪ್ರತಿಯನ್ನು ಲಗತ್ತಿಸಿದೆ)

ಇ) ಜವಾಹರ್ ರೋಜಗಾರ್ ಯೋಜನೆಯ ಮಾರ್ಗದರ್ಶನದಂತೆ ಮೀಸಲಿಟ್ಟ ವಲಯಗಳಿಗೆ ಹಣಕಾಸು ಏರ್ಪಾಟು ಮಾಡಿದಂತಹ ಪ್ರತಿ ಜಿಲ್ಲೆಗೆ ಹಂಚಿಕೆ ಮಾಡಿದ ನಿಧಿಗಳ ಶೇಕಡ 80ಕ್ಕಿಂತ ಕಡಿಮೆ ಇಲ್ಲದಷ್ಟು ಭಾಗವನ್ನು ಗ್ರಾಮ ಪಂಚಾಯತಗಳಿಗೆ ವಿತರಣೆ ಮಾಡಲಾಗುವುದು. ಉಳಿದ ಶೇಕಡಾ 20 ರಷ್ಟು ನಿಧಿಗಳನ್ನು ಜಿಲ್ಲಾಮಟ್ಟದಲ್ಲಿ ಅಂತರ ವಿಭಾಗ ಗ್ರಾಮ ಕಾಮಗಾರಿಗಳಿಗಾಗಿ ಬಳಸಲಾಗುತ್ತದೆ.

ಈ) ಮಾರ್ಗದರ್ಶಿಗಳಲ್ಲಿ ಈ ಬಗ್ಗೆ ನಿರ್ದಿಷ್ಟವಾಗಿ ಅವಕಾಶವಿರುವುದಿಲ್ಲ.

ಅನುಬಂಧ - 1

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 383(ಅ)

1995-96ನೇ ಸಾಲಿನ ಜಿಲ್ಲಾ ಪಂಚಾಯತಗಳಿಗೆ ಜವಾಹರ್ ರೋಜಗಾರ್ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಹಣದ ಜಿಲ್ಲಾವಾರು ವಿವರದ ತಃಖ್ತೆ.

(ಲಕ್ಷ ರೂ.ಗಳಲ್ಲಿ)

ಕ್ರ. ಸಂ.	*ಜಿಲ್ಲೆ*	*ಹಣ*
1	ಬೆಂಗಳೂರು	149.85
2	ಬೆಂಗಳೂರು (ಗ್ರಾಮಾಂತರ)	224.21
3	ಬೆಳಗಾಂ	237.06
4	ಬಳ್ಳಾರಿ	275.69
5	ಬೀದರ್	206.51
6	ಬಿಜಾಪುರ	330.23
7	ಚಿಕ್ಕಮಗಳೂರು	173.23
8	ಚಿತ್ರದುರ್ಗ	366.02
9	ದಕ್ಷಿಣ ಕನ್ನಡ	184.34

10	ಧಾರವಾಡ	333.58
11	ಗುಲ್ಬರ್ಗಾ	428.46
12	ಹಾಸನ	213.23
13	ಕೊಡಗು	108.26
14	ಕೋಲಾರ	401.35
15	ಮಂಡ್ಯ	141.04
16	ಮೈಸೂರು	349.78
17	ರಾಯಚೂರು	351.99
18	ಶಿವಮೊಗ್ಗ	218.16
19	ತುಮಕೂರು	352.23
20	ಉತ್ತರ ಕನ್ನಡ	116.27
	ರಾಜ್ಯ ಕೋಶ	10.00
	ಒಟ್ಟು	**5171.49**

EXTRACT OF JRY MANUAL - CHAPTER III - PARA 11

11. Criteria for Allocation of Resources :

11.1 The Central assistance will be allocated to the States/UTs to the total rural poor in the country. The poverty estimates prepared by the planning Commission, based on latest available results of National Sample Survery Organisation's (NSSO) survery in this regard will be used for this purpose.

11.2 From States to the districts, the allocation of funds will be made on the index of backwardness formulated on the basis of equal weightage to the proportion of rural SC/ST population in a district to total SC/ST population in the State and inverse of per capita production of the agricultural workers in that district.

11.3 Not less than 80 percent of the funds allocated to each district, after providing for earmarked sectors, will be distributed to the

village panchayats (that is the lowest level elected body in the district). The balance 20% funds could be utilised at the district level for inter-blcok/ village works.

11.4 For the purposes of allocation of funds to the village panchayats, the population of each village panchayat having less than 1000 population will be taken as 1,000 and more than 10,000 as a 10,000. The population of SC/STs will also be adjusted accordingly, 60% of the resources earmarked for village panchayats will be distributed on the basis of adjusted SC/ST population and 40% on the basis of adjusted total population(including SC/ ST population).

ಬೈಂದೂರು ವಿಧಾನ ಸಭಾಕ್ಷೇತ್ರದ ರಸ್ತೆಗಳ ದುರಸ್ತಿ.

174 - ಶ್ರೀ ಐ.ಎಂ. ಜಯರಾಮ ಶೆಟ್ಟಿ (ಬೈಂದೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಂದೂರು ವಿಧಾನ ಸಭಾಕ್ಷೇತ್ರದಲ್ಲಿರುವ

1) ಜಡ್ಕಲ್ - ಸಿದ್ದಾಪುರ ರಸ್ತೆ

2) ಶಿರೂರು - ತೊಡಳ್ಳಿ ರಸ್ತೆಯ ರಚನೆಗಾಗಿ ಸರ್ಕಾರಕ್ಕೆ ಬಹಳ ಕಾಲದಿಂದಲೂ ಮನವಿಯನ್ನು ಸಲ್ಲಿಸುತ್ತಾ ಇದ್ದರೂ ಅದನ್ನು ಅಭಿವೃದ್ಧಿ ಪಡಿಸದೇ ಇರುವುದು ನಿಜವೇ?

ಆ) ಹಾಗಿದ್ದಲ್ಲಿ, ಸರ್ಕಾರವು ಯಾವಾಗ ಹಳ್ಳಿಯ ಈ ಮಹತ್ವದ ಸಂಪರ್ಕ ರಸ್ತೆಯ ರಚನೆಯನ್ನು ಅಭಿವೃದ್ಧಿಗೆ ಪ್ರಸ್ತಾಪಿಸಲಾಗುವುದು.

ಇ) ಕುಂದಾಪುರ-ತಾಲ್ಲೂಕಿನ ತಲ್ಲೂರು-ನೇರಳಕಟ್ಟೆ-ಅಜ್ರಿ-ಸಿದ್ದಾಪುರ ರಸ್ತೆಯು ಬಹಳ ಕೆಟ್ಟ ಸ್ಥಿತಿಯಲ್ಲಿದ್ದು ಅದರ ಸುಧಾರಣೆ ಹಾಗೂ ದುರಸ್ತಿಯನ್ನು ಕೂಡಲೇ ಕೈಗೆತ್ತಿಕೊಳ್ಳಬೇಕೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಜಿಲ್ಲಾ ಪಂಚಾಯತಿ ವಿಭಾಗದಲ್ಲಿ ಮೇಲಿನ ರಸ್ತೆಯ ದರುಸ್ತಿ ಹಾಗೂ ಸುಧಾರಣೆಗಾಗಿ ಸಾಕಷ್ಟು ಬಂಡವಾಳ ಇಲ್ಲದಿರುವುದರಿಂದ ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸುವ ಪ್ರಸ್ತಾವನೆಯು ಸರ್ಕಾರದ ಆಲೋಚನೆಯಲ್ಲಿರುವುದೇ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ. ರಸ್ತೆಗಳು ಈಗಾಗಲೇ ಅಸ್ತಿತ್ವದಲ್ಲಿದ್ದು ಈ ಎರಡೂ ರಸ್ತೆಗಳ ಅಭಿವೃದ್ಧಿಯನ್ನು 76.00 ಲಕ್ಷ ರೂ.ಗಳ ಅಂದಾಜಿನಲ್ಲಿ ತೆಗೆದುಕೊಳ್ಳಲಾಗಿದೆ.